**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

ವಿಷಯ: ಇಲಾಖೆಯಲ್ಲಿ ದತ್ತಾಂಶ ನಮೂದು ಸಹಾಯಕರ ಹುದ್ದೆಯಿಂದ ಹಿರಿಯ ಬೆರಳಚ್ಚುಗಾರರ ಹುದ್ದೆಗೆ ಬಡ್ತಿ ಹೊಂದಿದ ನೌಕರರಿಗೆ ಹಿರಿಯ ಬೆರಳಚ್ಚುಗಾರರ ಹುದ್ದೆಯಲ್ಲಿ ವೇತನ ನಿಗದಿಗೊಳಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿಯ ಆದೇಶ ಸಂಖ್ಯೆ:ಕಾಶಿಇ:28:ಹಿ.ಬೆ:ಬಡ್ತಿ:ಬಸ್ಥಾವಿ: 2022-23 ದಿನಾಂಕ:15.11.2022.

2) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಸಲ್ಲಿಸಿರುವ ವಿವಿಧ ದಿನಾಂಕದ ಪತ್ರಗಳು.

** ** **

**ಪ್ರಸ್ತಾವನೆ:**

ಇಲಾಖೆಯ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅರ್ಹ ದತ್ತಾಂಶ ನಮೂದು ಸಹಾಯಕರಿಗೆ ಉಲ್ಲೇಖ(1)ರ ಇಲಾಖಾ ಆದೇಶದಲ್ಲಿ ಹಿರಿಯ ಬೆರಳಚ್ಚುಗಾರರ ಹುದ್ದೆಗೆ ಬಡ್ತಿ ನೀಡಲಾಗಿತ್ತು, ಅದರಂತೆ ಉಲ್ಲೇಖ(2)ರಲ್ಲಿ ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರು ಹಿರಿಯ ಬೆರಳಚ್ಚುಗಾರರ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ನೌಕರರ ವೇತನ ನಿಗದೀಕರಣದ ಪ್ರಸ್ತಾವನೆ ಮತ್ತು ಸೇವಾ ವಹಿಯನ್ನು ಸಲ್ಲಿಸಿರುತ್ತಾರೆ. ಹಾಗೂ ಈ ಕಛೇರಿಯಲ್ಲಿ ಹಿರಿಯ ಬೆರಳಚ್ಚುಗಾರರ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ನೌಕರರು ಬಡ್ತಿಗೊಂಡ ಹುದ್ದೆಯಲ್ಲಿ ವೇತನ ನಿಗದಿಗೊಳಿಸಲು ಕೋರಿ ಮನವಿ ಸಲ್ಲಿಸಿರುತ್ತಾರೆ.

ಉಲ್ಲೇಖ(2) ರಲ್ಲಿ ಸಲ್ಲಿಸಿರುವ ಪ್ರಸ್ತಾವನೆ ಮತ್ತು ಸೇವಾ ವಹಿಯಲ್ಲಿನ ವಿವರಗಳನ್ವಾಧರಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 42(ಬಿ)(1) ಮತ್ತು (2) ರನ್ವಯ ಬಡ್ತಿಗೊಂಡ ನೌಕರರಿಗೆ ಹಿರಿಯ ಬೆರಳಚ್ಚುಗಾರರ ಹುದ್ದೆಯಲ್ಲಿ ವೇತನ ನಿಗದಿಗೊಳಿಸಿ, ಸರ್ಕಾರದ ಆದೇಶ ಸಂಖ್ಯೆ:ಆಇ:01:ಸೇನಿಸೇ: 2019, ದಿನಾಂಕ:11.01.2019 ಮತ್ತು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಎಫ್.ಡಿ:01:ಎಸ್.ಆರ್.ಎಸ್:2019, ದಿನಾಂಕ:04.05.2019ರಲ್ಲಿನ ಕಂಡಿಕೆ(6)ರಲ್ಲಿ ನೀಡಿರುವ ಸ್ಪಷ್ಟೀಕರಣದಂತೆ ಮುಂದಿನ ವಾರ್ಷಿಕ ವೇತನ ಬಡ್ತಿ ದಿನಾಂಕವನ್ನು ನಿಗದಿಗೊಳಿಸಲು ಈ ಆದೇಶ.

**ಆದೇಶ ಸಂಖ್ಯೆ:ಡಿಸಿಇ:ಎಸ್‌ಎಸ್1:ಪಿಪಿಎಫ್:01:2023:ಎಸ್‌ಇಆರ್-1 ಬೆಂಗಳೂರು**

**ದಿನಾಂಕ:19.05.2023**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಈ ಕಛೇರಿಯ ಉಲ್ಲೇಖ(1)ರ ಆದೇಶದಲ್ಲಿ ಹಿರಿಯ ಬೆರಳಚ್ಚುಗಾರರ ಹುದ್ದೆಗೆ ಸ್ಥಾನಪನ್ನ ಬಡ್ತಿ ಪಡೆದ ಈ ಕೆಳಕಂಡ ಹಿರಿಯ ಬೆರಳಚ್ಚುಗಾರರಿಗೆ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 42(ಬಿ)(1) ಮತ್ತು(2) ರನ್ವಯ ವೇತನ ಬಡ್ತಿಗೊಂಡ ಹಿರಿಯ ಬೆರಳಚ್ಚುಗಾರರ ಹುದ್ದೆಯಲ್ಲಿ ವೇತನ ಶ್ರೇಣಿ(ರೂ.27650-650-29600-750-32600-850-36000-950-39800-1100-46400-1250-52650) ರಲ್ಲಿ ವೇತನ ನಿಗದಿಗೊಳಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ಆಇ:01:ಸೇನಿಸೇ:2019, ದಿನಾಂಕ:11.01.2019 ಮತ್ತು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಎಫ್.ಡಿ:01:ಎಸ್.ಆರ್.ಎಸ್:2019,

2..

ದಿನಾಂಕ:04.05.2019ರಲ್ಲಿನ ಕಂಡಿಕೆ(6)ರಲ್ಲಿ ನೀಡಿರುವ ಸ್ಪಷ್ಟೀಕರಣದಂತೆ ಮುಂದಿನ ವಾರ್ಷಿಕ ವೇತನ ಬಡ್ತಿ ದಿನಾಂಕವನ್ನು ನಿಗದಿಗೊಳಿಸಲಾಗಿದೆ.

| ಕ್ರ ಸಂ | ನೌಕರರ ಹೆಸರು ಶ್ರೀ/ಶ್ರೀಮತಿ | ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಕಛೇರಿ/ ಕಾಲೇಜಿನ ಹೆಸರು | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಲಾದ ಕಛೇರಿ/ಕಾಲೇಜಿನ ಹೆಸರು | ಬಡ್ತಿ ಪೂರ್ವದಲ್ಲಿ ಪಡೆಯುತ್ತಿದ್ದ ಮೂಲ ವೇತನ ಹಾಗೂ ವೇತನ ಶ್ರೇಣಿ ಮತ್ತು ವಾರ್ಷಿಕ ವೇತನ ಬಡ್ತಿ ದಿನಾಂಕ (ರೂ.ಗಳಲ್ಲಿ) | ಬಡ್ತಿ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ (ಪೂರ್ವಾಹ್ನ /ಅಪರಾಹ್ನ) | ಬಡ್ತಿ ಹುದ್ದೆಯಲ್ಲಿ ಅನ್ವಯವಾಗುವ ವೇತನ ನಿಗದಿಯ ದಿನಾಂಕ, ಕ.ನಾ.ಸೇ.ನಿ ನಿಯಮ 42(ಬಿ) (1) ಮತ್ತು (2)ರ ಪ್ರಕಾರ ನಿಗಧಿಪಡಿಸಿದ ವೇತನ ಮತ್ತು ವೇತನ ಶ್ರೇಣಿ. (ರೂ.ಗಳಲ್ಲಿ) | ಮುಂದಿನ ವಾರ್ಷಿಕ ವೇತನ ಬಡ್ತಿ ದಿನಾಂಕ |
|---|---|---|---|---|---|---|---|
| 1 | ವೀಣಾ ಬಾಯಿ ಮೋರೆ ಬಿ.ಹೆಚ್ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಶಿವಮೊಗ್ಗ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಪೂಜಿನಗರ, ಶಿವಮೊಗ್ಗ-577201 | 27,650/- (23500-47650) 01.01.2022 | 25.11.2022 ಪೂರ್ವಾಹ್ನ | 25.11.2022 ರೂ.28,300/- (27650-52650) ದಿ:01.01.2023ರ ವಾ.ವೇ.ಬಡ್ತಿ- ರೂ.650/-ರ ದರದಲ್ಲಿ ರೂ.28,950/- | 01.01.2024 |
| 2 | ಉಮಾಶ್ರೀ ಆರ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆಂಗೇರಿ, ಬೆಂಗಳೂರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು-560104 | 27,650/- (23500-47650) 01.01.2022 | 21.11.2022 ಅಪರಾಹ್ನ | 22.11.2022 ರೂ.28,300/- (27650-52650) ದಿ:01.01.2023ರ ವಾ.ವೇ.ಬಡ್ತಿ- ರೂ.650/-ರ ದರದಲ್ಲಿ ರೂ.28,950/- | 01.01.2024 |
| 3 | ನಾಗರತ್ನ ಎನ್ ಜಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರಸಿಂಹರಾಜಪುರ, ಚಿಕ್ಕಮಗಳೂರು ಜಿಲ್ಲೆ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ-577126 | 29,600/- (23500-47650) 01.07.2022 | 28.11.2022 ಪೂರ್ವಾಹ್ನ | 28.11.2022 ರೂ.30,350/- (27650-52650) | 01.07.2023 |

ಮುಖ್ಯ ಆಡಳಿತಾಧಿಕಾರಿಗಳು(ಪ್ರ)
ಕಾಲೇಜು ಶಿಕ್ಷಣ ಇಲಾಖೆ

ನಿಬಂಧನೆಗಳು:-

1) ಈ ಆದೇಶವನ್ನು ಸ್ಥಳೀಯ ಲೆಕ್ಕ ಪತ್ರದ ಪರಿಶೀಲನೆಗೆ ಒಳಪಡಿಸತಕ್ಕದ್ದು.

3..

2) ಈ ವೇತನ ನಿಗಧೀಕರಣದಿಂದ ಒಂದು ವೇಳೆ ಹೆಚ್ಚುವರಿಯಾಗಿ ಏನಾದರೂ ವೇತನ ಪಾವತಿಯಾದಲ್ಲಿ ಮರು ವಸೂಲಾತಿ ಮಾಡುವ ಷರತ್ತಿಗೊಳಪಟ್ಟಿರುತ್ತದೆ.
3) ಈ ಆದೇಶವನ್ನು ಸದರಿಯವರ ಸೇವಾ ಪುಸ್ತಕದಲ್ಲಿ ದಾಖಲಿಸುವುದು.
4) ವೇತನ ನಿಗಧೀಕರಣದಲ್ಲಿ ವಾರ್ಷಿಕ ವೇತನ ಬಡ್ತಿಗಳು ಒಳಗೊಂಡಿದ್ದಲ್ಲಿ ಅನಧಿಕೃತವಾಗಿ ಗೈರು ಹಾಜರಾಗದಿರುವ ಬಗ್ಗೆ ಖಚಿತಪಡಿಸಿಕೊಂಡು ಮಂಜೂರುಗೊಳಿಸತಕ್ಕದ್ದು, ಇಲ್ಲವಾದಲ್ಲಿ ಸಂಬಂಧಿಸಿದ ಕಛೇರಿ/ಕಾಲೇಜು ಮುಖ್ಯಸ್ಥರಿಂದ ಹೊಣೆಗಾರರನ್ನಾಗಿಸಲಾಗುವುದು.
5) ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರುಗೊಳಿಸುವ ಪೂರ್ವದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ: 03:ಎಸ್.ಆರ್.ಪಿ:1996, ದಿನಾಂಕ:18.03.1996ರಲ್ಲಿನ ಕ್ರಮ ಸಂಖ್ಯೆ 3ರಲ್ಲಿನ ಷರತ್ತನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಂಡು ಮಂಜೂರುಗೊಳಿಸತಕ್ಕದ್ದು.
6) ವೇತನ ನಿಗಧೀಕರಣದಲ್ಲಿ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ನಮೂದಿಸಿದ್ದಲ್ಲಿ, ಸದರಿ ವಾರ್ಷಿಕ ವೇತನ ಬಡ್ತಿಯು ನೌಕರರು ವಯೋನಿವೃತ್ತಿ ಹೊಂದುವ ಸಾಲಿನ ಮಾಹೆಯ ನಂತರದ ಇನ್ನಿತರ ಮಾಹೆಯಾಗಿದ್ದಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರುಗೊಳಿಸದಿರತಕ್ಕದ್ದು.
7) ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012ರ ತಿದ್ದುಪಡಿ ಆದೇಶ ಅಧಿಸೂಚನೆ:ಸಿಆಸುಇ/13/ಸೇವನೆ/2022, ದಿನಾಂಕ:22.03.2022 ರನ್ವಯ ದಿನಾಂಕ:31.12.2022 ರ ಒಳಗಾಗಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ನಿಗದಿತ ಅವಧಿಯೊಳಗಾಗಿ ಶೇ.50ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗತಕ್ಕದ್ದು. ಒಂದೊಮ್ಮೆ ಸರ್ಕಾರವು ಸದರಿ ಪರೀಕ್ಷೆಯನ್ನು ಸಕಾಲದಲ್ಲಿ ನಡೆಸಿದ್ದು, ಅಭ್ಯರ್ಥಿಯು ಹಾಜರಾಗದೇ ಅಥವಾ ನಿಗದಿತ ಅಂಕಗಳನ್ನು ಗಳಿಸದೇ ಅನುತ್ತೀರ್ಣರಾಗಿದ್ದಲ್ಲಿ ಅಂತಹ ಸಿಬ್ಬಂದಿಗೆ ಬಡ್ತಿಯ ವೇತನ ನಿಗಧೀಕರಣ ಹಾಗೂ ವಾರ್ಷಿಕ ವೇತನ ಬಡ್ತಿ ನೀಡುವಲ್ಲಿ ಪ್ರಾಂಶುಪಾಲರು ಪರಿಶೀಲಿಸಿ ಕ್ರಮವಹಿಸುವಂತೆ ಸೂಚಿಸಿದೆ.

ಇವರಿಗೆ:

1) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
2) ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ(ಮೇಲ್ಕಂಡ ನೌಕರರ ಸೇವಾ ವಹಿಗಳನ್ನು ಈ ಆದೇಶದೊಂದಿಗೆ ಲಗತ್ತಿಸಿ ಹಿಂದಿರುಗಿಸಲಾಗಿದೆ).
3) ಸಂಬಂಧಪಟ್ಟ ಉಪಖಜಾನಾಧಿಕಾರಿಗಳು, ಉಪಖಜಾನೆ -ಮಾಹಿತಿಗಾಗಿ
4) ಲೆಕ್ಕಾಧಿಕಾರಿಗಳು(ಲೆಕ್ಕಪತ್ರ), ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
5) ಪತ್ರಾಂಕಿತ ವ್ಯವಸ್ಥಾಪಕರು/ಅಧೀಕ್ಷಕರು, ಹಣ ಮತ್ತು ಪಾವತಿ ವಿಭಾಗ, ಹೆಚ್.ಆರ್.ಎಂ.ಎಸ್ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು
6) ಸಂಬಂಧಪಟ್ಟ ನೌಕರರುಗಳಿಗೆ(ಪ್ರಾಂಶುಪಾಲರ ಮುಖಾಂತರ)-ಮಾಹಿತಿಗಾಗಿ
7) ಕಛೇರಿ ಪ್ರತಿ